ರಮೇಶ ಜ. ಬೊಂಗಾಳೆ, ಬೈಲಹೊಂಗಲ
ಮನುಷ್ಯನಿಗೆ ದೇವರ ಕೃಪೆಯಾಗುವುದು ಯಾವಾಗ ಸರ್?



ವೈದ್ಯರ ಅಂತಿಮ ಕೃಪೆಯೂ ಕೊನೆಗೊಂಡಾಗ.

ಇಂಚರ ದತ್, ಮೈಸೂರು
ಜಾತಿ ಮತಗಳಿಂದ ಕೂಡಿದ ರಾಜಕೀಯದಲ್ಲಿ ಮಠದ ಸ್ವಾಮಿಗಳು ಪ್ರವೇಶಿಸುವುದು ಸರಿಯಾದ ನಡೆಯೆ?
ಪೀಠಕ್ಕಾಗಿ ರಾಜಕೀಯ ಮಾಡುವ ಸ್ವಾಮಿಗಳು ರಾಜಕೀಯದ ಪೀಠಕ್ಕೆ ಬರುವುದು ಸಹಜ ಕು ನಡೆಯಷ್ಟೆ.

ಶೃತಿ ರಿಗ್ರೆಟ್ ಅಯ್ಯರ್, ಬೆಂಗಳೂರು
ನೈಟ್ ಬೀಟ್ ಪೊಲೀಸರು ಬರುವಾಗ ವಿಷಲ್ ಹಾಕಿ, ಲಾಠಿ ಬಡಿಯುವುದೇಕೆ?
'ನಮ್ಮಯ ಬೀಟು ಬಿಟ್ಟೇ ಬಿಟ್ಟೆ; ನಿಮ್ಮಯ ಆಸ್ತಿ ನೋಡಿಕೊಳ್ಳಿ' ಎಂದು ಮಲಗಿದವರನ್ನು ಎಬ್ಬಿಸಲು.

ಟಿ.ಎಂ. ಮಾನಪ್ಪ, ಶಿವಮೊಗ್ಗ
ಕಪ್ಪು ಹುಡುಗಿಯರು ಬಿಳಿಯ ಹುಡುಗರನ್ನೇ ಪ್ರೀತಿಸುವುದೇಕೆ?



ಕರೆಂಟ್ ಹೋದಾಗ ಮನೆಯಲ್ಲಿ ಒಬ್ಬರಾದರೂ ಕಾಣುವಂತೆ ಇರಲೆಂದು.

ಮಹಾವೀರ ಕಾಸರ, ಶಿವಮೊಗ್ಗ
ವಾನರರಾಜ, ಸೈನಿಕರಿಗೆ ಬಾಲ ಇವೆ. ಅವರ ಹೆಂಡತಿಯರಿಗೇಕೆ ಬಾಲಗಳಿಲ್ಲ?
ಇದ್ದವಂತೆ. ಆ ಕಾಲದಲ್ಲಿ ಸತಿಯರು ಪತಿಯರ ಮುಂದೆ ಬಾಲ ಬಿಚ್ಚುವಂತಿರಲಿಲ್ಲವಂತೆ.

ಎಸ್ವೆನ್ಕೆ, ಕಡೂರು
ಕಷ್ಟವಾದ ಪ್ರಶ್ನೆಗಳಿಗೆ ಉತ್ತರಿಸುವ ಕಷ್ಟವನ್ನೇ ನೀವು ತೆಗೆದುಕೊಳ್ಳುವುದಿಲ್ಲವಂತೆ?
ಅಂತಹ ಪ್ರಶ್ನೆಗಳು ಎಂದಾದರೂ ಬಂದರೆ ಹಾಗೆಯೇ ಮಾಡುವೆನೋ ಏನೋ!

ಎಚ್.ಆರ್. ಪ್ರಕಾಶ್, ಹೊಸನಗರ
ಪೂಜ್ಯ ದಾಸರು 'ದೇವನೊಬ್ಬ ನಾಮ ಹಲವು' ಅಂದಿದ್ದರು. ಈಗ...?
ನೆಟ್ ಬ್ಯಾಂಕಿಂಗ್ ಒಂದೇ, ನಾಮ ಹಾಕುವವರು ಹಲವರು.

ಮಲ್ಲಿಕಾರ್ಜುನ ಎಸ್.ಬಿ. ಸುರಧೇನುಪುರ
ಇಂದು ಅತ್ತೆಗೊಂದು ಮನೆ, ಸೊಸೆಗೊಂದು ಮನೆ. ಮುಂದೆ...?
ಮಾವನಿಗೊಂದು ಕ್ವಾರ್ಟರ್, ಅಳಿಯನಿಗೊಂದು ಕ್ವಾರ್ಟರ್.

ಮಹೇಶ್ವರ ಹುರುಕಡ್ಲಿ, ಬಾಚಗೊಂಡನಹಳ್ಳಿ
ಬಹುತೇಕ ರಾಜಕಾರಣಿಗಳು ದೇವರ ಹೆಸರಿನಲ್ಲೇ ಪ್ರಮಾಣ ವಚನ ಸ್ವೀಕರಿಸುವುದೇಕೆ?
ತಮ್ಮಿಂದ ಪ್ರಜೆಗಳನ್ನು ದೇವರೇ ಕಾಪಾಡಬೇಕೆಂದು ಸೂಚಿಸಲು.

ವಿ. ಮಾಧವ ಶಾನಭಾಗ, ಕುಂದಾಪುರ
ನೀರು ಮತ್ತು ನೀರೆಯರೊಂದಿಗೆ ಚೆಲ್ಲಾಟವಾಡಬಾರದು ಎಂದು ಹೇಳುವ ಕಾರಣ?
ಸುಳಿಗೆ ಸಿಕ್ಕರೆ ಬಿಡುಗಡೆಯಿಲ್ಲ, ದೂರ ಸರಿದರೆ ತೃಷೆ ತಪ್ಪಿದ್ದಲ್ಲವಾದ್ದರಿಂದ.

ವಿಜಯ ರಾವ್, ಬೆಂಗಳೂರು
ಮಂತ್ರಿ, ಮು.ಮಂ. ಪ್ರಧಾನಿ ಹುದ್ದೆಗೆ ಮಿಲಿಟರಿ/ಹಿಮಾಲಯದಲ್ಲಿದ್ದು ಬಂದವರಷ್ಟೇ ಅರ್ಹವೆಂದರೆ ಹೇಗೆ?
'ಹಿಮಾಲಯ/ಮಿಲಿಟರಿ ಬೋಗಸ್ ಸರ್ಟಿಫಿಕೇಟ್ ಹಗರಣ' ತಲೆಯೆತ್ತುತ್ತದೆ.

ಪಿ.ಜೆ. ರಾಘವೇಂದ್ರ, ಮೈಸೂರು
ರಾಜಕಾರಣಿಗಳಿಗೆ ವೈರಾಗ್ಯ ಭಾವ ಮೂಡುವುದಿಲ್ಲವೇಕೆ?
ಕುರ್ಚಿಯೆಂಬ ಮೋಹಿನಿ ಎದುರೇ ಇರುವಾಗ ವೈರಾಗ್ಯ ಅಸಂಭವ.

ಆರ್. ನಾಗರಾಜ್, ಗೊರೂರು
ಹರಿದ ಚಪ್ಪಲಿಗೆ ಇರುವ ಬೆಲೆ ಸತ್ತ ಮನುಷ್ಯನಿಗೆ ಇರೋದಿಲ್ವಾ?
ನೇತ್ರದಾನ, ದೇಹದಾನ ಮಾಡಿದರೆ ಅಮೂಲ್ಯವೇ ಆಗಿಬಿಡುತ್ತೆ.

## ಬಹುಮಾನಿತ ಪ್ರಶ್ನೆ

ರಾಜೀವ್ ಎನ್. ಮಾಗಲ್, ಸಕಲೇಶಪುರ
ಮುಂದಿನ 'ಬಿಗ್ ಬಾಸ್' ಅನ್ನು ಮಲೆನಾಡ ಕುಗ್ರಾಮದಲ್ಲಿ ಮಳೆಗಾಲದಲ್ಲಿ 3 ತಿಂಗಳು ನಡೆಸಿದರೆ ಫಲಿತಾಂಶ ಏನಿರಬಹುದು?
ಸ್ಪರ್ಧಿಗಳೆಲ್ಲ ಕಷಾಯ, ತಂಬುಳಿ ಮಾಡುವುದರಲ್ಲಿ ಎಕ್ಸ್‌ಪರ್ಟ್ ಆಗಬಹುದು.

ಎಂ.ಬಿ. ಕೃಷ್ಣಮೂರ್ತಿ, ಚಾಮರಾಜನಗರ
ಮಗಳ ಗಂಡನಿಗೂ, ಮಗನ ಹೆಂಡತಿಗೂ ಏನು ವ್ಯತ್ಯಾಸ?
ಮಗಳ ಗಂಡನ ವರಮಾನ ಮುಖ್ಯ; ಮಗನ ಹೆಂಡತಿಯ ಅಭಿಮಾನ ಮುಖ್ಯ.

ರಾಜೀವ್ ಕುಮಾರ್, ದಾವಣಗೆರೆ
ಹೆಣ ಬೀಳುವುದು ಅನ್ನುತ್ತಾರಲ್ಲ, ಹಾಗೆಂದರೇನು?
ನನ್ನ ನೆಣ ಬಿತ್ತು– ನನ್ನೆಣ ಬಿತ್ತು– ನನ್ಹೆಣ ಬಿತ್ತು ಎಂದಾಗಿದೆ. ಅಸಲಿಗೆ ಇಲ್ಲಿ ಬಿದ್ದಿರುವುದು ಭಾಷೆಯ ಹೆಣ.

ಪೂರ್ಣಿಮಾ ಮೂರ್ತಿ, ಊರಿಲ್ಲ
ಮತ್ತೇರಿಸುವ ಮದ್ಯಕ್ಕೇಕೆ ಕಾನೂನಿನ ಕಡಿವಾಣವಿಲ್ಲ ರಾಮ್‌ಜೀ?



ರಾಜಕಾರಣಿಗಳನ್ನು ಮತ್ತೆ ಮತ್ತೆ ಅಧಿಕಾರಕ್ಕೆ ಏರಿಸಲು ಅದೇ ನಿಚ್ಚಣಿಗೆ ಆಗಿರುವುದರಿಂದ.

ರಾಂಚಂದ್ರ ಕೊಪ್ಪಲು, ತೀರ್ಥಹಳ್ಳಿ
ಭ್ರಷ್ಟಾಚಾರ ಮುಕ್ತ ಕರ್ನಾಟಕ ಮಾಡ್ತೀವಿ ಅಂತ ಯಾವ ರಾಜಕಾರಣಿಯೂ ಹೇಳುವುದಿಲ್ಲವೇಕೆ?
ಹೇಳುವುದಕ್ಕಿಂತ ಮಾಡುವುದು ಉತ್ತಮವೆಂದು ಈಗ ಭ್ರಷ್ಟಾಚಾರ ನಮ್ಮಲ್ಲಿ ಮುಕ್ತವೇ.

ರತ್ನಾ ರಾಜ್‌ಕುಮಾರ್, ಹಾಸನ
ಗೃಹಿಣಿ ಗೃಹಮುಚ್ಯತೆ ಎನ್ನುವರು ಗುರೂಜಿ, ಆದರೆ ಗೃಹಸ್ಥ...?
ಗೃಹ ಸೂಚ್ಯತೆ – ಇದೇ ನಿನ್ನ ಮನೆಯೆಂದು ಸೂಚಿಸುವವನು ಅವನೇ.

■ ರಾಮ್

ಪ್ರಶ್ನೆ ಕಳುಹಿಸಲು: editorsu@sudha.co.in